# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 917 |
| ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 14-03-2025 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ತಾಲ್ಲೂಕಿನಲ್ಲಿ ಅತೀ ಹೆಚ್ಚು ಭತ್ತವನ್ನು ಬೆಳೆಯುವುದರಿಂದ ಭತ್ತದ ಕಣಜ, ಭತ್ತದ ನಾಡು ಎಂದು ಕರೆಯಲಾಗುತ್ತಿದ್ದು, ಈ ಭಾಗದಲ್ಲಿ ಭತ್ತದ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು) | ರಾಜ್ಯದಲ್ಲಿ 2023-24ನೇ ಸಾಲಿನಲ್ಲಿ ಒಟ್ಟು 46.90 ಲಕ್ಷ ಟನ್ ಭತ್ತವನ್ನು ಉತ್ಪಾದಿಸಲಾಗಿರುತ್ತದೆ. ರಾಯಚೂರು ಜಿಲ್ಲೆಯಲ್ಲಿ 11.40 ಲಕ್ಷ ಟನ್ ಭತ್ತ ಉತ್ಪಾದಿಸಲಾಗಿದ್ದು, ಪ್ರಥಮ ಸ್ಥಾನದಲ್ಲಿರುತ್ತದೆ. ನಂತರದ ಸ್ಥಾನಗಳಲ್ಲಿ ಬಳ್ಳಾರಿ (5.18 ಲಕ್ಷ ಟನ್.), ಯಾದಗಿರಿ (4.72 ಲಕ್ಷ ಟನ್), ಕೊಪ್ಪಳ (4.22 ಲಕ್ಷ ಟನ್) ಜಿಲ್ಲೆಗಳಿದ್ದು, ದಾವಣಗೆರೆ, ಮೈಸೂರು, ಮಂಡ್ಯ ಜಿಲ್ಲೆಗಳೂ ಸಹ ಪ್ರಮುಖ ಭತ್ತ ಉತ್ಪಾದನೆಯಾಗುತ್ತಿರುವ ಜಿಲ್ಲೆಗಳಾಗಿವೆ.<br><br>2024-25ನೇ ಸಾಲಿನಲ್ಲಿ ಎರಡನೇ ಅಂದಾಜಿನ ಪ್ರಕಾರ ಒಟ್ಟು 42.14 ಲಕ್ಷ ಟನ್ ಭತ್ತದ ಉತ್ಪಾದನೆ ಅಂದಾಜಿಸಲಾಗಿದೆ. (ಬೇಸಿಗೆ ಹಂಗಾಮಿನ ಉತ್ಪಾದನೆ ಹೊರತುಪಡಿಸಿ).<br><br>ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾಲಯಗಳು ಮತ್ತು ಹಲವು ಸಂಶೋಧನಾ ಕೇಂದ್ರಗಳು ಭತ್ತ ತಳಿ ಸಂಶೋಧನೆ ಮತ್ತು ಉತ್ಪಾದನಾ ತಾಂತ್ರಿಕತೆಗಳ ಅಭಿವೃದ್ಧಿಯಲ್ಲಿ ತೊಡಗಿವೆ ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ಕೃಷಿ ವಿಶ್ವವಿದ್ಯಾಲಯಗಳು ಉತ್ತಮ ಗುಣಮಟ್ಟದ ಭತ್ತದ ಬೀಜವನ್ನು ಉತ್ಪಾದಿಸಿ ರೈತರಿಗೆ ವಿತರಿಸುತ್ತಿವೆ. ಅಲ್ಲದೆ, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ ಮತ್ತು Agricultural and Processed Food Products Export Development Authority (APEDA) ಸಂಸ್ಥೆಗಳು ಕೃಷಿ ಉತ್ಪನ್ನಗಳ ರಫ್ತು ಉತ್ತೇಜಿಸುವ ನಿಟ್ಟಿನಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿವೆ. ಈ ಕಾರಣಗಳಿಂದಾಗಿ ಪ್ರತ್ಯೇಕವಾದ 'ಭತ್ತ ಅಭಿವೃದ್ಧಿ ಮಂಡಳಿ' ಸ್ಥಾಪಿಸುವ ಪ್ರಸ್ತಾಪ ಇರುವುದಿಲ್ಲ. |

*ಕೃಇ 45 ಎಎಂಎಸ್ 2025*

**(ಎನ್.ಚಲುವರಾಯಸ್ವಾಮಿ)**
ಕೃಷಿ ಸಚಿವರು